

## ಆ್ಯಕ್ಷನ್ ತಾರೆ

ದೀಪಿಕಾ ಪಡುಕೋಣೆ ಈಗ ಬಾಲಿವುಡ್‌ನ ಹೊಸ ಆ್ಯಕ್ಷನ್ ತಾರೆ. ಸ್ಪೀಡ್–2 ಚಿತ್ರದಲ್ಲಿ ಈಕೆ ಸ್ವತಃ ಸ್ಟಂಟ್‌ಗಳಲ್ಲಿ ಭಾಗವಹಿಸಿದ ರೀತಿಯನ್ನು ನೋಡಿ ಇಡೀ ಚಿತ್ರತಂಡ ಬೆರಗಾಯಿತಂತೆ. ನಿರ್ದೇಶಕರಾದ ಅಬ್ಬಾಸ್– ಮಸ್ತಾನ್ ಜೋಡಿ ದೀಪಿಕಾಳ ಧೈರ್ಯವನ್ನು ಎಲ್ಲೆಡೆ ಮುಕ್ತಕಂಠದಿಂದ ಹೊಗಳುತ್ತಿದ್ದಾರೆ!

26ರ ಹರೆಯದ ಈ ಸುಂದರಿಯನ್ನು ಬಾಲಿವುಡ್‌ನ ಅತ್ಯಂತ ಸೆಕ್ಸೀ ನಟಿ ಎಂದೇ ಪರಿಗಣಿಸಲಾಗಿತ್ತು. ಈ ಸೆಕ್ಸೀ ಪಟ್ಟಕ್ಕಾಗಿ ಈಕೆ ಕತ್ರೀನಾ ಮತ್ತು ಕರೀನಾ ಜತೆಗೆ ತೀವ್ರ ಪೈಪೋಟಿಯನ್ನು ನಡೆಸಿದ್ದಳು. ಈಗ ಸೆಕ್ಸೀ ಎನ್ನುವುದರ ಜತೆಗೆ ಬೋಲ್ಡ್ ಎಂಬ ಬಿರುದೂ ಲಭಿಸಿದೆ. 'ಚಿತ್ರದ ಕಾರ್ ಚೇಸಿಂಗ್ ದೃಶ್ಯಗಳಲ್ಲಿ ಡ್ಯೂಪ್ ಇಲ್ಲದೆ ಧೈರ್ಯದಿಂದ ಭಾಗವಹಿಸಿದ್ದಾಳೆ. ನಿಜಜೀವನದಲ್ಲೂ ಈಕೆ ಬಹಳ ಧೈರ್ಯವಂತೆ ಎನ್ನುವುದು ಸಾಬೀತಾಗಿದೆ. ಜತೆಗೆ ಈಕೆಗೆ ಪಿಸ್ತೂಲ್ ಹಿಡಿಯುವ ವಿದ್ಯೆಯೂ ಕರತಲಾಮಲಕವಾಗಿದೆ. ಈಕೆಯಷ್ಟು ಚೆನ್ನಾಗಿ ಪಿಸ್ತೂಲ್ ಹಿಡಿಯುವ ನಟಿಯರು ಇನ್ನೊಬ್ಬರಿಲ್ಲ' ಎಂದು ನಿರ್ದೇಶಕರು ಹೇಳುತ್ತಾರೆ.

"ಕಾರ್ ಚೇಸಿಂಗ್ ದೃಶ್ಯಗಳಲ್ಲಿ ಮೊದಲ ಎರಡು ದಿನ ನಿಜಕ್ಕೂ ಭಯವಾಗಿತ್ತು. ಆದರೆ ನಿರ್ದೇಶಕರು, ಸಹನಟರು ಧೈರ್ಯ ತುಂಬಿದರು. ಆ ಬಳಿಕ ಹುಮ್ಮಸ್ಸಿನಿಂದಲೇ ಮುನ್ನುಗ್ಗಿದೆ" ಎಂದು ನಗುತ್ತಾಳೆ ದೀಪಿಕಾ.

2008ರಲ್ಲಿ ತೆರೆಗೆ ಬಂದ 'ರೇಸ್' ತನ್ನ ವೇಗದ ನಿರೂಪಣೆಯಿಂದ ಬಾಕ್ಸಾಫೀಸ್‌ನಲ್ಲಿ ಯಶಸ್ಸು ಕಂಡಿತ್ತು. ಇದೀಗ ಅದರ ಎರಡನೆ ಭಾಗ ಸಿದ್ಧವಾಗುತ್ತಿದೆ. ಚಿತ್ರದಲ್ಲಿ ಸೈಫ್ ಅಲಿ ಖಾನ್, ಜಾನ್ ಅಬ್ರಹಾಂ, ಅನಿಲ್ ಕಪೂರ್, ಜಾಕ್ವೆಲಿನ್ ಮತ್ತು ಅಮಿಶಾ ಪಟೇಲ್ ನಟಿಸಿದ್ದಾರೆ. 2013ರ ಜನವರಿ 25ಕ್ಕೆ ಬಿಡುಗಡೆ ದಿನಾಂಕವೂ ನಿಗದಿಯಾಗಿದೆ.

## ಭರ್ಜರಿ ಬಾಂಡ್

ಜೇಮ್ಸ್ ಬಾಂಡ್ ಖುಷ್ ಹುವಾ! ಭಾರತದಲ್ಲಿ ಬಿಡುಗಡೆಯಾದ ಹೊಸ ಬಾಂಡ್ ಚಿತ್ರ 'ಸ್ಕೈ ಫಾಲ್' ಮೊದಲ ನಾಲ್ಕು ದಿನಗಳಲ್ಲಿ 27.5 ಕೋಟಿ ರೂಪಾಯಿ ಬಾಚಿಕೊಂಡು ದಾಖಲೆ ನಿರ್ಮಿಸಿದೆ. ಭಾರತದಲ್ಲಿ ಬಿಡುಗಡೆಯಾದ ಯಾವ ಬಾಂಡ್ ಚಿತ್ರವೂ ಈವರೆಗೆ ಮೊದಲ ವಾರದಲ್ಲೇ ಇಷ್ಟೊಂದು ಹಣ ಗಳಿಸಿಲ್ಲವಂತೆ. ಭಾರತದಲ್ಲಿ ಬಿಡುಗಡೆಯಾದ ಹಾಲಿವುಡ್ ಸಿನಿಮಾಗಳಲ್ಲೇ ಈ ಚಿತ್ರಕ್ಕೆ ಗಳಿಕೆಯಲ್ಲಿ ಎರಡನೆ ಸ್ಥಾನ ಲಭಿಸಿದೆ. ಬಹುಶಃ ಇನ್ನೊಂದು ವಾರ ಓಡಿದರೆ, ಮೊದಲ ಸ್ಥಾನ ಖಚಿತ.

ಇಂಗ್ಲಿಷ್, ಹಿಂದಿ, ತಮಿಳು, ತೆಲುಗು ಭಾಷೆಗಳಲ್ಲಿ ಬಿಡುಗಡೆಯಾದ ಸ್ಕೈ ಫಾಲ್‌ನ ಒಟ್ಟು 907 ಪ್ರಿಂಟ್‌ಗಳನ್ನು ಹಾಕಲಾಗಿತ್ತು. ಡೇನಿಯಲ್ ಕ್ರೇಗ್ ಈ ಹಿಂದೆ ನಟಿಸಿದ ಕ್ಯಾಸಿನೋ ರಾಯಲ್ ಚಿತ್ರದ ಗಳಿಕೆಯ ದಾಖಲೆಯನ್ನೂ ಈ ಚಿತ್ರ ಮುರಿದು ಹಾಕಿದೆಯಂತೆ!

## ಇಮೋಷನಲ್ ಕತ್ರೀನಾ

'ಜಬ್ ತಕ್ ಹೈ ಜಾನ್' ಚಿತ್ರದ ಬಗ್ಗೆ ಏನೇ ಬರೆದರೂ, ಮಾತನಾಡಿದರೂ ಅದರ ನಿರ್ದೇಶಕ ಯಶ್ ಚೋಪ್ರಾ ಅವರ ನೆನಪಾಗುವುದು ಸಹಜ. ಚಿತ್ರ ಬಿಡುಗಡೆಗೆ ಮುನ್ನ ವಿಧಿವಶರಾದ ಯಶ್ ಚೋಪ್ರಾ ಬಗ್ಗೆ ಚಿತ್ರದ ಹೀರೋಯಿನ್ ಕತ್ರೀನಾ ಅಂತೂ ತೀರಾ ಭಾವುಕಳಾಗುತ್ತಿದ್ದಾಳೆ. ಕಳೆದ ವಾರ



ಚಿತ್ರದ ಪ್ರಚಾರಕ್ಕೆ ಜಲಂಧರ್‌ಗೆ ತಾರಾಬಳಗ ಭೇಟಿ ನೀಡಿದಾಗ, ಕತ್ರೀನಾ ಅತ್ತು ಬಿಡುವುದೊಂದು ಬಾಕಿ! ಜಲಂಧರ್‌ನಲ್ಲೇ ಜೀವನದ ಹೆಚ್ಚಿನ ಅವಧಿಯನ್ನು ಕಳೆದ ಯಶ್ ಚೋಪ್ರಾ ಬಗ್ಗೆ ಮಾತನಾಡುವಾಗ ಕತ್ರೀನಾ ಕಣ್ಣೀರನ್ನು ಕಷ್ಟಪಟ್ಟು ತಡೆದಳಂತೆ.

ಹೀಗೆ ಭಾವುಕಳಾಗುವುದಕ್ಕೂ ಕಾರಣವಿದೆ. ಚಿತ್ರದ ಶೂಟಿಂಗ್ ಲಂಡನ್‌ನಲ್ಲಿ ನಡೆಯುತ್ತಿದ್ದಾಗ ಯಶ್, ಕತ್ರೀನಾಗೆ ತುಂಬಾ ನಿಕಟವಾದರಂತೆ. ಕತ್ರೀನಾಳ ವೈಯಕ್ತಿಕ ಜೀವನ, ಕುಟುಂಬದ ಬಗ್ಗೆ ಎಲ್ಲವನ್ನೂ ವಿಚಾರಿಸುತ್ತಿದ್ದ ಚೋಪ್ರಾಜಿ, ಜೀವನವನ್ನು ಹೇಗೆ ಎದುರಿಸಬೇಕು ಎಂಬ ಬಗ್ಗೆ ಆತ್ಮೀಯವಾಗಿ ಮಾತನಾಡುತ್ತಿದ್ದರಂತೆ.

■ ಬಿಂದು